ನಗರಾಭಿವೃದ್ಧಿ ಇಲಾಖೆಗೆ ಆಯವ್ಯಯದಲ್ಲಿ ಬಿಡುಗಡೆ ಮಾಡಲಾದ ಹಣದ ವಿವರ

1037(816) ಶ್ರೀ ಮಹದೇವ ಪ್ರಸಾದ್ ಹೆಚ್ ಎಸ್:(ಗುಂಡ್ಲುಪೇಟೆ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಗರಾಭಿವೃದ್ಧಿ ಇಲಾಖೆಗೆ 2008–09 ಮತ್ತು 2009–10ನೇ ಸಾಲಿನ ಆಯವ್ಯಯದಲ್ಲಿ ಎಷ್ಟು ಹಣವನ್ನು ಮಂಜೂರು ಮಾಡಲು ಅಂದಾಜಿಸಲಾಗಿತ್ತು; ಈ ಪೈಕಿ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ; ಹಾಗೂ ಎಷ್ಟು ಹಣವನ್ನು ಖರ್ಚು ಮಾಡಲಾಗಿದೆ ;

ಆ) ಕೇಂದ್ರ ಸರ್ಕಾರದಿಂದ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ ಹಾಗೂ ಈ ಪೈಕಿ ಎಷ್ಟು ಹಣವನ್ನು ಖರ್ಚು ಮಾಡಲಾಗಿದೆ ;

ಇ) ನಗರಾಭಿವೃದ್ಧಿ ಇಲಾಖೆಯು ಯಾವ ಯಾವ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ ; ಈ ಯೋಜನೆಗಳಿಗೆ ಕಳೆದ ಎರಡು ವರ್ಷಗಳಲ್ಲಿ ಕೇಂದ್ರ ಸರ್ಕಾರದಿಂದ ಎಷ್ಟು ಅನುದಾನ ಬಂದಿದೆ?

ಶ್ರೀ ಬಿ ಎಸ್ ಯಡಿಯೂರಪ್ಪ(ಮುಖ್ಯಮಂತ್ರಿಗಳು)

ಅ) ನಗರಾಭಿವೃದ್ಧಿ ಇಲಾಖೆಗೆ 2008–09 ಮತ್ತು 2009–10ನೇ ಸಾಲಿನ ಆಯವ್ಯಯದಲ್ಲಿ ಅಂದಾಜಿಸಲಾದ ಹಣ, ಬಿಡುಗಡೆ ಮಾಡಲಾದ ಹಣ ಹಾಗೂ ಖರ್ಚುಮಾಡಲಾದ ಹಣದ ವಿವರ ಈ ಕೆಳಕಂಡಂತಿದೆ:

ವರ್ಷ	ಅಂದಾಜಿಸಲಾದ ಹಣ (ಪರಿಷ್ಕೃತ ಅಂದಾಜು)	ಬಿಡುಗಡೆ ಮಾಡಲಾದ ಹಣ	ಖರ್ಚು ಮಾಡಲಾದ ಹಣ
2008–09 (ಯೋಜನೆ)	3116.79	2620.85	2936.32
ಯೋಜನೇತರ	1666.00	1666.00	1652.00
ಒಟ್ಟು	**4782.79**	**4286.85**	**4588.32**
2009–10 (ಯೋಜನೆ)	4271.86	3590.00	4444.39
ಯೋಜನೇತರ	1996.67	1916.18	1896.83
ಒಟ್ಟು	**6268.53**	**5506.18**	**6341.22**

- ಆಯಾ ವರ್ಷಗಳಲ್ಲಿ ಹಿಂದಿನ ಸಾಲಿನಲ್ಲಿ ಬಿಡುಗಡೆಯಾಗಿ ವೆಚ್ಚವಾಗದೇ ಬಾಕಿ ಉಳಿದ ರಾಜ್ಯ ಮತ್ತು ಕೇಂದ್ರದ ಪಾಲಿನ ಹಣವನ್ನು (Opening Balance – OB) ಪ್ರಸಕ್ತ ಸಾಲುಗಳಲ್ಲಿ ವೆಚ್ಚ ಮಾಡಲಾಗಿರುವುದರಿಂದ ಬಿಡುಗಡೆಯಾದ ಹಣಕ್ಕೆ ಹೋಲಿಸಿದಲ್ಲಿ ಹೆಚ್ಚಿನ ವೆಚ್ಚವಾಗಿರುತ್ತದೆ.

ಆ) ಕೇಂದ್ರ ಸರ್ಕಾರದಿಂದ ಮತ್ತು 12ನೇ ಹಣಕಾಸು ಆಯೋಗದ ಅನುದಾನದಿಂದ ಬಿಡುಗಡೆ ಮಾಡಲಾದ ಹಣ ಹಾಗೂ ಖರ್ಚು ಮಾಡಲಾದ ಹಣದ ವಿವರಗಳು ಈ ಕೆಳಕಂಡಂತಿದೆ:

2008–09ನೇ ಸಾಲಿಗೆ ರೂ.586.17 ಕೋಟಿಗಳನ್ನು ಬಿಡುಗಡೆ ಮಾಡಲಾಗಿದ್ದು ರೂ 586.09 ಕೋಟಿಗಳನ್ನು ಖರ್ಚು ಮಾಡಲಾಗಿದೆ.

2009–10ನೇ ಸಾಲಿನಲ್ಲಿ ರೂ.380.65 ಕೋಟಿಗಳನ್ನು ಬಿಡುಗಡೆ ಮಾಡಲಾಗಿದ್ದು, ಅದರಲ್ಲಿ ರೂ.320.52 ಕೋಟಿಗಳನ್ನು ಖರ್ಚುಮಾಡಲಾಗಿದೆ.

ಇ) ನಗರಾಭಿವೃದ್ಧಿ ಇಲಾಖೆಯ ಅಡಿಯಲ್ಲಿ ಅನುಷ್ಠಾನಗೊಳಿಸುತ್ತಿರುವ ಕೇಂದ್ರ ಪುರಸ್ಕೃತ ಯೋಜನೆಗಳಾದ ಜೆಎನ್ಎನ್ಯುಆರ್ಎಂ, ಯುಐಡಿಎಸ್ಎಸ್ಎಂಟಿ, ಎಸ್ಜೆಎಸ್ಆರ್ವೈ ಹಾಗೂ 12ನೇ ಹಣಕಾಸು ಆಯೋಗದ ಅನುದಾನ, ಈ ಯೋಜನೆಗಳಡಿ ಕಳೆದ ಎರಡು ವರ್ಷಗಳಲ್ಲಿ ಕೇಂದ್ರದಿಂದ ಬಿಡುಗಡೆಯಾದ ಹಣದ ಬಗ್ಗೆ ವಿವರಗಳನ್ನು ಅನುಬಂಧ–1ರಲ್ಲಿ ಒದಗಿಸಲಾಗಿದೆ.

ಅನುಬಂಧ–1

2008–09 ಮತ್ತು 2009–10ನೇ ಸಾಲಿನಲ್ಲಿ ಕೇಂದ್ರ ಸರ್ಕಾರದಿಂದ ವಿವಿಧ ಯೋಜನೆಗಳಡಿಯಲ್ಲಿ ಬಿಡುಗಡೆ ಮಾಡಲಾದ ಹಣದ ಬಗ್ಗೆ ವಿವರಗಳು

(ಕೋಟಿ ರೂ.ಗಳಲ್ಲಿ)

ಕೇಂದ್ರ ಪುರಸ್ಕೃತ ಯೋಜನೆಗಳ ವಿವರಗಳು	ಕೇಂದ್ರದಿಂದ ಬಿಡುಗಡೆಯಾದ ಹಣ	
	2008–09	**2009–10**
JNNURM – Urban Infrastructure & Governance 2217-80-800-0-06	85.49	167.26
JNNURM- Basic Services for Urban Poor (BSUP) 2217-80-800-0-07	39.21	73.16
Urban Infrastructure Development Scheme for Small & Medium **Towns (UIDSSMT)** CSS 2217-80-800-0-08	243.69	13.82
Swarna Jayanthi Shahari Rozgar Yojana (SJSRY) USEP 3475-00-108-1-01	108.47	37.72
Swarna Jayanthi Shahari Rozgar Yojana (SJSRY) UWEP 3475-00-108-1-02		
12Th Finance Commission Grants	109.84	88.69
Total	**586.17**	**380.65**

ಉಡುಪಿ ಪವರ್ ಕಾರ್ಪೊರೇಶನ್ ಉದ್ಯೋಗಿಗಳು